


# ಇದು ಎಲ್ಲರೊಳಗೆ ಒಂದಾದವರ ಕಪ್

**ಕ್ರಿಕೆಟ್‌ನಲ್ಲಿ ಬ್ಯಾಟ್ಸ್‌ಮನ್‌ಗಳಿಗೆ ಸ್ವಾರ್ಥಿಗಳೆಂಬ ಹಣೆಪಟ್ಟಿ ಸುಲಭವಾಗಿ ಅಂಟಿಕೊಳ್ಳುತ್ತದೆ. ಈ ಸಲ ಅಮೆರಿಕ–ಕೆರೀಬಿಯನ್ ದ್ವೀಪದಲ್ಲಿ ನಡೆದ 'ಟ್ವೆಂಟಿ20 ವಿಶ್ವಕಪ್ ಕ್ರಿಕೆಟ್'ನಲ್ಲಿ ಭಾರತವು ಚಾಂಪಿಯನ್ ಆಗಿ ಹೊಮ್ಮಿದ ಬಗೆಯಲ್ಲಿ ಸ್ವಾರ್ಥದ ಛಾಯೆಗಳಿಲ್ಲ; ಇಡುಕಿರಿದಿರುವುದು ನಿಸ್ವಾರ್ಥ ಕಥನಗಳು. ಅಷ್ಟೇ ಅಲ್ಲ; ಬೌಲರ್‌ಗಳ ನಗೆಬುಗ್ಗೆಗಳಿವೆ, ಹಿರಿಯ ಆಟಗಾರರು 'ಇನ್ನು ಈ ಆಟ ಸಾಕು' ಎಂದು ಬ್ಯಾಟನ್ ದಾಟಿಸಿದ ಭಾವುಕ ತಿರುವೂ ಇದೆ.**

■ **ವಿಶಾಖ ಎನ್.**

ಹನ್ನೆರಡನೇ ಓವರ್‌ನಲ್ಲಿ 56 ರನ್‌ಗಳಿಗೆ ಶ್ರೀಲಂಕಾ ಮೂರು ವಿಕೆಟ್ ಕಳೆದುಕೊಂಡಿದ್ದಾಗ ಅರವಿಂದ ಡಿಸಿಲ್ವ ಕ್ರೀಸ್‌ಗೆ ಬಂದರು. ಅದು 2002ರ ಜುಲೈ ತಿಂಗಳು. ಡಿಸಿಲ್ವ ಬದುಕಿನ ಕೊನೆಯ ಟೆಸ್ಟ್ ಕ್ರಿಕೆಟ್ ಪಂದ್ಯ. ಬಾಂಗ್ಲಾದೇಶ ಮೊದಲ ಬಾರಿಗೆ ದ್ವೀಪರಾಷ್ಟ್ರಕ್ಕೆ ಪ್ರವಾಸ ಬಂದಿದ್ದ ಸರಣಿಯ ಮೊದಲ ಪಂದ್ಯವದು. ಮರ್ವನ್ ಅಟಪಟ್ಟು, ರಸೆಲ್ ಅರ್ನಾಲ್ಡ್ ಹಾಗೂ ಮಾಹೇಲ ಜಯವರ್ಧನ ಮೂವರೂ ಔಟಾಗಿದ್ದರು. ಹೊಳಪು ಕಂಗಳ ಕುಮಾರ ಸಂಗಕ್ಕಾರ ಜೊತೆಗೂಡಿದ ಡಿಸಿಲ್ವ ಇನ್ನೊಂದು ತಾಲೀಮು ಎನ್ನುವಂತೆ ಆಡಿದರು. ಫ್ಲಿಕ್‌ಗಳು, ಆನ್‌ಡ್ರೈವ್‌ಗಳಿಗೆ ತಮ್ಮದೇ ರುಜು ಹಾಕುವ ಜಾಯಮಾನ ಅವರದ್ದು. 28 ಬೌಂಡರಿಗಳು ಅವರ ಬ್ಯಾಟ್‌ನಿಂದ ಹೊಮ್ಮಿದವು. ಒಂದಷ್ಟೇ ಸಿಕ್ಸರ್.

234 ಎಸೆತಗಳಲ್ಲಿ 206 ರನ್ ಹೊಡೆದ ಅವರು, ಬಾಂಗ್ಲಾ ಬೌಲರ್ ಇನಾಮುಲ್ ಹಕ್ ಅವರಿಗೆ ಎಲ್‌ಬಿ ಔಟ್ ಆಗಿ ನಡೆದಾಗ, ಅಭಿಮಾನಿಗಳಿಂದ ದೀರ್ಘಾವಧಿ ಕರತಾಡನ.

ಕ್ರಿಕೆಟಿಗನೊಬ್ಬನಿಗೆ ಕೊನೆಯ ಪಂದ್ಯದಲ್ಲಿ ಇಂತಹ ವಿದಾಯ ಸಿಗಲು ಅದೃಷ್ಟ ಇರಬೇಕು. ಅಷ್ಟು ಚೆನ್ನಾಗಿ ಆಡಿ, ಪಂದ್ಯವನ್ನು ಗೆಲ್ಲಿಸಿಕೊಟ್ಟು, 'ಇನ್ನು ಬೂಟುಗಳನ್ನು ನೇತುಹಾಕುವೆ' ಎಂದು ಹೇಳುವ ಭಾಗ್ಯ ಎಲ್ಲರದ್ದೂ ಆಗಿರುವುದಿಲ್ಲ.

ಮೊನ್ನೆ ಮೊನ್ನೆ ಕಂಡದ್ದು ವಿರಾಟ್ ಕೊಹ್ಲಿ ಅವರ ಅಂತಹುದೇ ಭಾಗ್ಯದ ಅಧ್ಯಾಯ. ಟ್ವೆಂಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರಿನ್ನು ಆಡುವುದಿಲ್ಲ ಎಂದು ಘೋಷಿಸುವ ಮೊದಲು ಪಂದ್ಯ ಪುರುಷೋತ್ತಮ ಪ್ರಶಸ್ತಿ ಅವರ ಕೈಲಿ ಇತ್ತು; ಅದೂ ವಿಶ್ವಕಪ್ ಟ್ವೆಂಟಿ20 ಫೈನಲ್‌ನಲ್ಲಿ ಸಂದುದು.

ದಕ್ಷಿಣ ಆಫ್ರಿಕಾ ಎದುರು ಫೈನಲ್‌ನಲ್ಲಿ ಕೊನೆಯ ಐದು ಓವರ್‌ಗಳಲ್ಲಿ ಭಾರತ ಗೆಲುವನ್ನು ಕಸಿದುಕೊಂಡಿತು

